Reg No BG 155 9-1-1969

52nd Year of Publication

SATYAVADI Daily, MYSORE-4

ಸತ್ಯವಾದಿ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

Please Visit
Bank Road Babusar,
The Standard Shop
with a Standard Price
and a Standard Policy.
A Fair Price Shop
in Actual Practice.
You are quite safe in your
dealings with them
No Worry.
No higgle-haggling.

ಪಾಕಿಸ್ತಾನದಲ್ಲಿ ಶಾಸನಭಂಗ ಚಳವಳಿಯೇ?

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಮೈಸೂರಿನಲ್ಲಿ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಿತ್ತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟ್ಯಾಕೇಸಿನವರು, ಪದ್ಮಭೂಷಣ ಸೇತ್ರದ್ಯಾನಿ ಡಾ|| ಎಂ.ಸಿ. ಮೋದಿಯವರು ಡಾ|| ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಪ್ತಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅದರ ಏಜೆಂಟರುಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ : 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಗಂಧದಎಣ್ಣೆ ಕಾರ್ಖಾನೆಗಳ ವಿಸ್ತರಣೆ

ಶಿವಮೊಗ್ಗ — ರಾಜ್ಯದಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಗಳನ್ನು ರೂ. 20 ಲಕ್ಷ ಖರ್ಚಿನಲ್ಲಿ ಹಂತಹಂತವಾಗಿ ವಿಸ್ತರಿಸಲು ಸರ್ಕಾರ ನಿರ್ಧರಿಸಿರುವುದೆಂದು ಜೈಗಾರಿಕಾ ಮಂತ್ರಿ ಶ್ರೀ ರಾಜಶೇಖರ ಮೂರ್ತಿಯವರು ಹೇಳಿದರು.

ಪೋಲೀಸರ ಸಂಚು !

ತ್ರಿವೇಂದ್ರಂ — ಕೇರಳದ ಕೆಲವು ಪೋಲೀಸು ಅಧಿಕಾರಿಗಳು ಪನಂಪಳ್ಳಿ ಗೋವಿಂದ ಮೆನನ್ನರ ಮತ್ತು ಇತರ ಕಾಂಗ್ರೆಸಿಗರ ಸಲಹೆ ತೆಗೆದುಕೊಳ್ಳುತ್ತಿದ್ದು ನಂಬೂದರಿಪಾದರ ಸರಕಾರವನ್ನು ಉರುಳಿಸಲು ಸಂಚು ನಡೆಸುತ್ತಿರುವರೆಂದು. ಶಾಸನಸಭೆಯಲ್ಲಿ ತಿಳಿಸಲಾಯಿತು — ತಲಚೇರಿ ಮತ್ತು ಪುಲಪಳ್ಳಿ ಪೋಲೀಸು ಸ್ಟೇಷನ್‌ಗಳ ಮೇಲೆ ನಡೆದ ಧಾಳಿಯ ಬಗ್ಗೆ ತಮಗೆ ಮುಂಚಿತವಾಗಿ ತಿಳಿದಿದ್ದು ಆ ವಿಷಯವನ್ನು ಉನ್ನತ ಪೋಲೀಸು ಅಧಿಕಾರಿಗಳಿಗೆ ತಿಳಿಸಲಾಗಿದ್ದರೂ ಅದನ್ನು ತಡೆಗಟ್ಟುವಾರ್ಗ ಅನುಸರಿಸದೆ ಧಾಳಿ ತಪ್ಪಿಸಲು ವಿಫಲರಾದರೆಂದೂ ತಿಳಿಸಲಾಯಿತು.

★

ಸಭ್ಯಕ್ಕೆ ಇದು ತಪ್ಪಿತು !

ನವದೆಹಲಿ — ರಾಜ್ಯಗಳಲ್ಲಿನ ಭಾಷಾವಾರು ವ್ಯಾಜ್ಯ ವ್ಯವಸ್ಥೆಗೆ ಒಂದು ಸ್ಥಾಯಿ ಸಮಿತಿ ನಿರ್ಮಿಸಬೇಕೆಂಬ ರಾಷ್ಟ್ರಪತಿಯ ಭಾವೈಕ್ಯ ಶಿಫಾರಸ್ಸನ್ನು ಮುಂದಕ್ಕೆ ಹಾಕಲಾಯಿತು

●

ನಿಬಂಧನೆಯಲ್ಲಿ ಸಡಲಿಕೆ

ನವದೆಹಲಿ — ಭಾರತ ಪೌರರ ವಿದೇಶೀ ಪ್ರವಾಸಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಸ್ವಲ್ಪ ಸಡಲಿಸಲು ಅರ್ಥ ಸಚಿವಾಲಯವು ಯೋಚಿಸುತ್ತಿರುವುದಾಗಿ ವರದಿಯಾಗಿದೆ.

★

ಪ್ರಧಾನಿ ಇಂದಿರಾರವರ ನುಡಿ

ಲಂಡನ್ — ಪಾಕಿಸ್ತಾನಕ್ಕೆ ರಷ್ಯಾವು ಶಸ್ತ್ರಾಸ್ತ್ರ ಸರಬರಾಜು ಮಾಡುವುದನ್ನು ಟೀಕಿಸಿ, ಇದು ತೀವ್ರಾಟ ಹೆಚ್ಚಿಸುವ ಸಂಭವವಿದೆಯೆಂದು ಟೆಲಿವಿಜನ್‌ನಲ್ಲಿ ಸಂದರ್ಶನದಲ್ಲಿ ತಿಳಿಸಿದರು.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ

ಶ್ರೀನಗರ — ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪಾಕ್ ಸರಕಾರ ಏರ್ಪಡಿಸಿರುವ ಆಡಳಿತವನ್ನು ಉರುಳಿಸಲು ಅಲ್ಲಿಯ ಮೂರು ಪ್ರಮುಖ ರಾಜಕೀಯ ಪಕ್ಷಗಳು ನಿರ್ಧರಿಸಿವೆ.

★

ಸ್ವತಂತ್ರ ಪಕ್ಷ

ನವದೆಹಲಿ — 4 ರಾಜ್ಯಗಳಲ್ಲಿನ ಮಧ್ಯವರ್ತಿ ಚುನಾವಣೆಯಲ್ಲಿ ಸ್ವತಂತ್ರ ಪಕ್ಷವು ಕಮ್ಯೂನಿಸ್ಟೇತರ, ಕಾಂಗ್ರೆಸ್ಸೂ ಸೇರಿ ಇತರ ಪಕ್ಷಗಳೊಡನೆ ಮಿಳಿತವಾಗಲು ಇಚ್ಛಿಸಿದೆಯೆಂದು ಪಕ್ಷದ ಅಧ್ಯಕ್ಷ ಶ್ರೀ ಎನ್ ಜಿ ರಂಗಾ ಹೇಳಿದರು.

★

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ

ಬೆಂಗಳೂರು — ವಿಶ್ವವಿದ್ಯಾನಿಲಯದ ಐದನೇ ಪದವೀದಾನ ಸಮಾರಂಭ ಕಾಲದಲ್ಲಿ, ನಿನ್ನೆ ಹೊಸ ಪದವೀಧರರಿ ಒಂದು ಗುಂಪು 'ನಮಗೆ ಕೆಲಸ ಬೇಕು, ಕೆಲಸ ಕೊಡಿ" ಎಂದು ಕೂಗುತ್ತಾ ಗಲಾಟೆ ಮಾಡಿದರು.

★

ಚುನಾವಣೆ

ನಾಗರಕೊಯಿಲ್ — ಯಾವ ಗಲಾಟೆಯೂ ಇಲ್ಲದೆ ನಿನ್ನೆ ಚುನಾವಣೆಯು ಶಾಂತ ರೀತಿಯಿಂದ ನಡೆಯಿತು.

○

ಮಾವೋ ನಂತರ

ಶಾಂಘಾಯ್ — ಪಾರ್ಟಿ ನಾಯಕತ್ವಕ್ಕೆ ಮಾವೋರ ಉತ್ತರಾಧಿಕಾರಿಯಾಗಿ ಚೀನಾದ ರಕ್ಷಣಾ ಮಂತ್ರಿ ಲಿನ್ ಪಿಯೋ ಎಂದು ಚೀನಾ ಕಮ್ಯೂನಿಸ್ಟ್ ಪಾರ್ಟಿಯ ಸಂವಿಧಾನ ತಿದ್ದುಪಡಿ ಅಂಗೀಕರಿಸಿದ ಸಂದರ್ಭದಲ್ಲಿ ತಿಳಿಸಲಾಗಿದೆ.

ಪಾಕಿಸ್ತಾನದಲ್ಲಿನ ಚಳವಳಿ

ಕರಾಚಿ — ಅಧ್ಯಕ್ಷ ಅಯೂಬರ ವಿರುದ್ಧ ಪಾಕಿಸ್ತಾನಿ ವಿರೋಧ ಪಕ್ಷಗಳ ಪ್ರಜಾರಾಜ್ಯ ಪುನರುತ್ಥಾನಕ್ಕಾಗಿ ಸಾಮೂಹಿಕ ಚಳವಳಿದಲ್ಲಿ ಶಾಸನಭಂಗವನ್ನೂ ಹೂಡಬಹುದೆಂದು ಒಂದು ಕರಾಚಿ ವೃತ್ತ ಪತ್ರಿಕೆ ಎಚ್ಚರಿಸಿದೆ — ಮುಂದಿನ ಅಧ್ಯಕ್ಷ ಚುನಾವಣೆಯಲ್ಲಿ ಭುಟ್ಟೋರವರು ನಿಲ್ಲುವುದು ಖಂಡಿತವೆಂದೂ, ಪಾಪಸ್ಸಿನ ಪ್ರಶ್ನೆಯೇ ಇಲ್ಲವೆಂದೂ ಪ್ರಜಾಪಕ್ಷದ ಹಂಗಾಮಿ ಅಧ್ಯಕ್ಷ ಶ್ರೀ ರಹೀಂರು ಲಾಹೋರಿನಲ್ಲಿ ತಿಳಿಸಿದರು.

ಪಶುಸಂಪತ್ತು ಅಭಿವೃದ್ಧಿ

ಬೆಂಗಳೂರು — ಹುಬ್ಬಳ್ಳಿ-ಧಾರವಾಡದ ಭಾಗದಲ್ಲಿ ಪಶುಸಂಪತ್ತು ಅಭಿವೃದ್ಧಿಗೊಳಿಸಲು ರೂ. 40 ಲಕ್ಷ ಸ್ಕೀಮನ್ನು ಸರ್ಕಾರ ಮಂಜೂರ್ಮಾಡಿರುವ ಮತ್ತು ರಾಜ್ಯದ್ಯಂತ 12 ಸ್ಥಳಗಳಲ್ಲಿ ದನದ ಸಂತೆ ಏರ್ಪಡಿಸಲು ರೂ. 1 ಲಕ್ಷ ಖರ್ಚು ಮಾಡಲಾಗುವುದೆಂದು ಪಶುಪಾಲನಾ ಮಂತ್ರಿ ಶ್ರೀ ಜಿ ಬಿ ಶಂಕರರಾವ್‌ರವರು ಹೇಳಿದರು

●

ಕನ್ನಡದ ಮೇಲ್ಮೆ

ಬೆಂಗಳೂರು — ಡಾ|| ಕೆ ವಿ ಪುಟ್ಟಪ್ಪನವರು ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಸಲಹಿ ಅಭಿವೃದ್ಧಿಪಡಿಸುವದು ಪ್ರಥಮ ಕರ್ತವ್ಯವೆಂದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ತಿಳಿಸಿದರು — ಕನ್ನಡದ ಮೇಲೆ ಹಿಂದಿ ಹೇರುವುದು ಅಪಾಯಕಾರಿ ಎಂದೂ ತಿಳಿಸಿದರು.

★

ಬಡ್ಡಿ ಏರಿಕೆ

ನವದೆಹಲಿ — ಅಮೇರಿಕಾದ ಅನೇಕ ಬ್ಯಾಂಕುಗಳು ಬಡ್ಡಿ ದರವನ್ನು ಏರಿಸಿವೆ.

ಭಾರತ - ಇರಾನ್

(ಡಾ || ತಾರಾಚಂದರ ಲೇಖನದಿಂದ)

ಭಾರತ–ಇರಾನಗಳು ಪುರಾತನ ಕಾಲದಿಂದಲೂ ಒಂದು ಉತ್ತಮ ನೆರೆಹೊರೆ; ಈ ಎರಡೂ ದೇಶಗಳ ನಡುವೆ ಅನಾದಿಕಾಲದಿಂದಲೂ ನಿಕಟವಾದ ಬಾಂಧವ್ಯವಿದೆ. ಹಿಂದುಗಳು ಮತ್ತು ಇರಾನಿಯನರ ಪೂರ್ವಜರು ಮಧ್ಯ ಏಷ್ಯಾದ ಹುಲ್ಲುಗಾವಲು ಪ್ರದೇಶದಲ್ಲಿ ಅನೇಕ ಶತಮಾನಗಳ ಕಾಲ ಸಹಜೀವನ ನಡೆಸಿದ್ದಾರೆ. ಆಕ್ಸಸ್ ಮತ್ತು ಆಮೂನದಿಗಳು ಅವರಿಗೆ ದಿವ್ಯಜೀವನವನ್ನು ನೀಡಿವೆ. ಭಾರತೀಯರು ಮತ್ತು ಇರಾನಿಯನರ ಆಧ್ಯಾತ್ಮಿಕ ಹಾಗೂ ಲೌಕಿಕ ಸಂಬಂಧಗಳೂ ಆಷ್ಟೇ ನಿಕಟ; ಹಿಂದೂಗಳು ಮತ್ತು ಇರಾನಿಯನರ ಭಾಷೆ ಒಂದೇ ಆಗಿದ್ದಿತು. ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಗಳ ತಾಯಿನುಡಿಯಾದ ಇಂಡೋ–ಆರ್ಯನ್ ಭಾಷೆಯಲ್ಲಿ ಅವರು ಮಾತನಾಡುತ್ತಿದ್ದರು. ಪ್ರಕೃತಿ ಮತ್ತು ಮಾನವನ ಬಗ್ಗೆ ಅವರು ಒಂದೇ ಬಗೆಯ ದೃಷ್ಟಿಕೋನ ಹೊಂದಿದ್ದರು. ಮುಂದೆ ವಿಭಿನ್ನವಾದ ಸನ್ನಿವೇಶದಲ್ಲಿ ವಿವಿಧ ನಾಡುಗಳ ಜನರ ಸಂಪರ್ಕ ಬಂದು, ಅವರ ಜೀವನಕ್ರಮದಲ್ಲಿ ಬದಲಾವಣೆಯಾಯಿತು. ಆದರೂ ಅವರ ಮನಸ್ಸಿನ ಮೇಲೆ ಆಗಿದ್ದ ಪ್ರಭಾವ ಅಚ್ಚಳಿಯದೇ ಹಾಗೇ ಉಳಿದಿದೆ.

ಭಾರತೀಯರು ಮತ್ತು ಇರಾನಿನವರ ಜೀವನಕ್ರಮ ಮತ್ತು ದೃಷ್ಟಿಕೋನದಲ್ಲಿ ಸಾಕಷ್ಟು ಹೋಲಿಕೆ ಇದೆ.

ಯಜ್ಞ ಯಾಗಗಳಲ್ಲಿ ಅಗ್ನಿ ವಿಶೇಷ ಪ್ರಾಧಾನ್ಯವಿತ್ತು. ಹೊಸ ವರ್ಷದ ಆರಂಭ, ಋತುಗಳು ಬದಲಾಗುವ ದಿನ, ಹುಣ್ಣಿಮೆ ಅಮಾವಾಸ್ಯೆ, ಜಾನ-ಪಾನಗಳು ಸ್ವರ್ಗ–ನರಕ ಇವೇ ಮೊದಲಾದ ವಿಷಯಗಳಲ್ಲಿ ಹಿಂದುಗಳು ಮತ್ತು ಇರಾನಿಯರ ಕಲ್ಪನೆ ಒಂದೇ ಬಗೆಯದಾಗಿತ್ತು.

ಪವಿತ್ರ ಖುರಾನಿನ ಕಲ್ಪನೆಯಂತೆ ದೇವರು ಸರ್ವಶಕ್ತ : ಮನುಷ್ಯ ಅವನ ಸೃಷ್ಟಿ : ಕಾರಣ ಮನುಷ್ಯ ದೇವರ ದಾಸ : ದೇವರ ಕೃಪಾಭಿಲಾಷಿ : ಅವನ ಕೋಪಕ್ಕೆ ಅಂಜುವನು. ದೇವರ ನಿಜ್ಞೆಯಂತೆ ನಡೆದುಕೊಂಡರೆ ಮೋಕ್ಷ, ಇಲ್ಲದಿದ್ದರೆ ಶಿಕ್ಷೆ.

ದೇವರು ಮತ್ತು ಧರ್ಮದ ವಿಷಯದಲ್ಲಿ ಭಾರತದ ಆರ್ಯರ ಹಾಗೂ ಇರಾನಿನ ಆರ್ಯರ ದೃಷ್ಟಿ ಒಂದೇ. ಕುಲ–ಧರ್ಮ ಬೇರೆಯಾದರೂ ಅವರ ಈ ಭಾವನೆಗೆ ಚ್ಯುತಿ ಬರಲಿಲ್ಲ.



Help The Gorakshana

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್

ಜಯಪ್ರದ 3 ನೇ ವಾರ

ಅದ್ಭುತ, ಅಸಮಾನ, ಅಸಾಧಾರಣ ಫಿಲಂಗೀತಿನ ವ್ಯಕ್ತಿಗಳ ವೈಭವಪೂರಿತ ಆಗಮನ

— ಜೆಮಿನಿಯವರ ಹಾಸ್ಯಮಯ ವರ್ಣರಂಜಿತ ಚಿತ್ರ (ಹಿಂದಿ) —

ತೀನ್ ಬಹುರಾಣಿಯಾ

ತಾರಾಗಣ — ಸಾಹುಕಾರ್ ಜಾನಕಿ, ಕಾಂಚನ, ಜಯಂತಿ, ಶಶಿಕಲಾ, ಆಘಾ, ರಮೇಶ್‌ದೇವ್, ರಾಜೇಂದ್ರನಾಥ್, ಪೃಥ್ವಿರಾಜ್ ಕಪೂರ್

[ದಿನ 3 ಪ್ರದರ್ಶನಗಳು]

ಅಪೆರಾ

ಜನಪ್ರಿಯ 5 ನೇವಾರ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ಪ್ಯಾರಾದ್

ಪಾತ್ರ – ಜಿತೇಂದ್ರ, ಬಬಿತಾ, ಸುಜೀತ್ ಕುಮಾರ್, ಮೆಹಮೂದ್

ನಿರ್ದೇಶನ – ಕುಂದನ್ ಕುಮಾರ್ ಸಂಗೀತ–ಚಿತ್ರಗುಪ್ತ

Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4